# 8

# ದೇವರ ಚಿತ್ತ

ಭೂಮಿಯ ಮೇಲೆ ಕೇವಲ ಸುರಕ್ಷಿತವಾದ ಸ್ಥಳವು ದೇವರ ಚಿತ್ತದ ಮಧ್ಯದಲ್ಲಿ ಇರುತ್ತದೆ! "ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ" (ಮತ್ತಾಯ 6:33ಎ). ದೇವರ ರಾಜ್ಯವು *ಮೊದಲು* ಬರುತ್ತದೆ! "ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" (ಮತ್ತಾಯ 26:39ಬಿ) ಎಂದೂ ಯೇಸು ಹೇಳಿದನು; "ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ" (ಇಬ್ರಿಯ 10:7; ನೋಡಿರಿ ವಚನ 9); "ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" (ಮತ್ತಾಯ 6:10ಬಿ). ನಮ್ಮ ಧಾರ್ಮಿಕ ಸಂಸ್ಕೃತಿಯ ಮೇಲೆ ಆತ್ಮಿಕತೆಯು ಪ್ರಭುತ್ವ ಬೀರುತ್ತದೆ, ಆದಾಗ್ಯೂ ದೇವರ ಚಿತ್ತದ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ. ನಮ್ಮ ಪ್ರತಿದಿನದ ಮನೋಭಾವನೆಗಳು ಮತ್ತು ಕೃತ್ಯಗಳು ಹೇಗೆ ಬಲವುಳ್ಳವುಗಳಾಗಿವೆ ಎಂಬುದನ್ನು ಕೆಲವರು ಗ್ರಹಿಸಿಕೊಳ್ಳುತ್ತಾರೆ. ಕ್ರೈಸ್ತನು ಎಂದೂ "ಕೆಲಸವಿಲ್ಲದವನಾಗಿರುವದಿಲ್ಲ." ದೇವರೊಂದಿಗಿನ ಜೀವಿತವು ಎಂದೂ ಸುಲಭವಾಗಿರುವದಿಲ್ಲ, ಎಂದೂ ಸ್ಥಿರಗೊಂಡಿರುವದಿಲ್ಲ, ಎಂದೂ ಪೂರ್ತಿಗೊಂಡಿರುವದಿಲ್ಲ. ನಾವು ಮೇಲಕ್ಕೆ - ಪ್ರಗತಿ ಹೊಂದತಕ್ಕದ್ದು.

ದೇವರ ಚಿತ್ತದಲ್ಲಿ ಯಾವುದೇ ಆಸಕ್ತಿಯನ್ನು ಬೆಳೆಸಿಕೊಳ್ಳದೆ ಧಾರ್ಮಿಕರಾಗಿರಲು ಅನೇಕರು ಯಾಕೆ ಹೋರಾಡುತ್ತಾರೆ? ತಪ್ಪು ಗ್ರಹಿಕೆಗಳ ಕಾರಣದಿಂದ:

(1) ದೇವರ ಚಿತ್ತವು ಒಳ್ಳೆಯದಾಗಿರುವದಿಲ್ಲವೆಂದು ಕೆಲವು ಜನರು ಯೋಚಿಸುತ್ತಾರೆ. ತಮ್ಮನ್ನು ಸಂತೋಷಪಡಿಸುವದನ್ನು ತಾವು ಮಾಡಬೇಕೆಂದು ಕೆಲವರು ಯೋಚಿಸುತ್ತಾರೆ - ಮತ್ತು ದೇವರ ಚಿತ್ತವನ್ನು ಮಾಡುವುದು ದುಃಖಿಗಳಾಗಿರಬೇಕಾಗುತ್ತದೆ ಎಂದು ನಂಬುತ್ತಾರೆ. ದೇವರು ಜೀವನದಿಂದ ತಮಾಷೆಯನ್ನು ತೆಗೆದು ಹಾಕುತ್ತಾನೆಂದು ಸೈತಾನನು ಹೇಳುತ್ತಾನೆ. ಅನೇಕ ಕ್ರೈಸ್ತರು ನಂಬಿಗಸ್ತರಾಗಿದ್ದೇವೆಂದು ಹೇಳುವವರು ಆನಂದವಿಲ್ಲದವರಾಗಿದ್ದಾರೆ! ಅದನ್ನು ಯಾರು ಬಯಸುತ್ತಾರೆ? ದೇವರ ಚಿತ್ತವನ್ನು ಕಂಡುಕೊಳ್ಳುವದಕ್ಕಾಗಿ ಒಬ್ಬನು ಮೊದಲು ದೇವರನ್ನು ಕಂಡುಕೊಳ್ಳಬೇಕು. ದೇವರು ಒಳ್ಳೆಯವನು ದೇವರನ್ನು ನಂಬಬಹುದು. ದೇವರು ನಮ್ಮ ಅತ್ಯುತ್ತಮವಾದದ್ದನ್ನು ಬಯಸುತ್ತಾನೆ. ದೇವರು ಒಳ್ಳೆಯತನವನ್ನು ತನ್ನ ಜೀವನದಲ್ಲಿ ನೋಡದಿರುವ ಕ್ರೈಸ್ತನು ಕುರುಡನಾಗಿದ್ದಾನೆ. ನಮಗೆ ಸಂಭವಿಸುವ ಅತ್ಯುತ್ತಮ ಸಂಗತಿಯು ಆತನಾಗಿದ್ದಾನೆ. ದೇವರು ದೇವರಾಗಿರಲಿ!

> ದೇವರ ಚಿತ್ತವನ್ನು ತಿಳಿಯುವುದು ಅತಿದೊಡ್ಡ
>   ಜ್ಞಾನವಾಗಿದೆ.
> ದೇವರ ಚಿತ್ತವನ್ನು ಕಂಡುಕೊಳ್ಳುವುದು ಅತಿ ದೊಡ್ಡ
>   ಸಂಶೋಧನೆಯಾಗಿದೆ.
> ದೇವರ ಚಿತ್ತವನ್ನು ಮಾಡುವುದು ಅತಿ ದೊಡ್ಡ ಬುದ್ಧಿವಂತಿಕೆಯಾಗಿದೆ.

(2) ಎರಡನೆಯ ತಪ್ಪಾಭಿಪ್ರಾಯವು "ನನ್ನ ಇಡೀ ಜೀವನಕ್ಕಾಗಿ ದೇವರಲ್ಲಿ ನೀಲ ನಕ್ಷೆಯಿದೆ" ಎಂಬುದು. ಇದು ಪರಿಶುದ್ಧ ಬರಹಕ್ಕನುಗುಣವಾದದ್ದಾಗಲೀ ಅರ್ಥವುಳ್ಳ

ದ್ದಾಗಲೀ ಆಗಿರುವದಿಲ್ಲ. ದೇವರು "ಮಾರ್ಗದರ್ಶನ ಮಾಡುವ ವ್ಯವಹಾರದಲ್ಲಿ" ಇದ್ದಾನೆ, "ನಕಾಸೆಯ ವ್ಯವಹಾರದಲ್ಲಿ" ಇರುವದಿಲ್ಲ. ಅಬ್ರಹಾಮನು ತಾನು ಎಲ್ಲಿಗೆ ಹೋಗುವೆನೆಂಬುದನ್ನು ಅರಿಯದೇ ಹೊರಟು ಹೋದನು. "ನನ್ನನ್ನು ಹಿಂಬಾಲಿಸು." ಎಂದು ಯೇಸುವು ಕೇವಲ ಒಂದೇ ಆಜ್ಞೆಯನ್ನು ಕೊಟ್ಟನು: ಇದು ನಮ್ಮ ಅನುದಿನದ ವಿಶ್ವಾಸದ ಸಾಹಸವಾಗಿದೆ. "ನನ್ನ ಜೀವನಕ್ಕಾಗಿ ದೇವರ ಚಿತ್ತವು ಏನಾಗಿದೆ?" ಎಂಬುದು ಪ್ರಶ್ನೆಯಲ್ಲ. "ದೇವರ ಚಿತ್ತವು ಏನಾಗಿದೆ" ಎಂಬುದು ಪ್ರಶ್ನೆಯಾಗಿದೆ. ಒಂದು ನಿರ್ದಿಷ್ಟವಾದ ಮಾರ್ಗದಲ್ಲಿ ನಮ್ಮನ್ನು ನಡಿಸುವದರಲ್ಲಿ ದೇವರು ಆಸಕ್ತನಾಗಿರುವದಿಲ್ಲ - "ನಿನ್ನ ಜೀವಿತವನ್ನು ನನಗೆ ಕೊಡು" ಎಂದು ಆತನು ಘೋಷಿಸುತ್ತಾನೆ. ನಾವು ನಡಿಸಲ್ಪಡುವದಕ್ಕಿಂತ ಹೆಚ್ಚಾಗಿ ದೇವರು ನಮ್ಮನ್ನು ನಡಿಸಲು ಬಯಸುತ್ತಾನೆ. ನಮ್ಮ ಕರೆಯುವಿಕೆಯು ಹಸ್ತಾಕ್ಷರ ಪ್ರತಿಯನ್ನು ಪುನಃ ಬರೆಯುವದಕ್ಕಾಗಿರುವದಿಲ್ಲ, ಆದರೆ ನಮ್ಮ ಪಾತ್ರವನ್ನು ಕಂಡುಕೊಂಡು ಅದನ್ನು ತುಂಬುವುದಾಗಿದೆ. ನಮ್ಮ ಚಿತ್ತವನ್ನು ಮಾಡುವಂತೆ ನಾವು ದೇವರನ್ನು ಒತ್ತಾಯ ಮಾಡಲು ಪ್ರಯತ್ನಿಸಬಾರದು, ಆದರೆ ದೇವರು ಎಲ್ಲಿ ಕೆಲಸ ಮಾಡುತ್ತಾನೆ ಮತ್ತು ಕೆಲಸದ ಭಾಗವಾಗುತ್ತಾನೆ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು.

(3) ದೇವರ ನಡಿಸುವಿಕೆಯ ಬಗ್ಗೆ ಜನರು ಗಲಿಬಿಲಿಗೊಂಡಿದ್ದಾರೆ. "ದೇವರು ನನಗೆ ಹೇಳಿದ್ದಾನೆ" ಎಂದು ವ್ಯಕ್ತಿಗಳು ಹೇಳುವದನ್ನು ನಾನು ಕೇಳಿಸಿಕೊಂಡಿದ್ದೇನೆ. ಅವರು ಪ್ರವಾದಿಗಳೋ? ಅವರು ಪ್ರೇರೇಪಣೆಯ ಹಿಂದಿರುವರೋ? ಅವರು ಪರಿಶುದ್ಧ ಬರಹಗಳಿಗೆ ಕೂಡಿಸಬಹುದೋ? ಜನರು ತಾವು ಪ್ರಸಂಗಿಸಲು, ಮಿಶನರಿಗಳಾಗಿರಲು, ಸಭೆಯ ಸಾಮ್ರಾಜ್ಯಗಳನ್ನು ಕಟ್ಟಲು ಕರೆಯಲ್ಪಟ್ಟಿದ್ದೇವೆ ಎಂದು ಸರಿಯಾಗಿ ಯೋಚಿಸದೇ ಇರುವಾಗ, ಭೀಕರ ಸಂಗತಿಗಳು ಸಂಭವಿಸುವವು. "ಸಲಹಾತ್ಮಕ ಸಾಮರ್ಥ್ಯದಲ್ಲಿ" ದೇವರ ಸೇವೆ ಮಾಡಲು ಹೆಚ್ಚಾದವರು ಬಯಸುತ್ತಾರೆ. ಜೀವನವು ನಾವು ಬಯಸಿದ್ದನ್ನು ಆಯ್ದುಕೊಂಡು ತೆಗೆದುಕೊಳ್ಳುವಂಥ ಸ್ವಯಂ ಪದ್ಧತಿಯ ಉಪಹಾರ ಗ್ರಹದಂತಿರುವದಿಲ್ಲ. ಜೀವನದ ಎಲ್ಲವೂ ದೇವರ ಅಧಿಕಾರದಲ್ಲಿರುವುದು. ನಾವು ದೇವರ ಪಾದಗಳ ಬಳಿಯಲ್ಲಿ ಕುಳಿತುಕೊಳ್ಳುತ್ತೇವೆ, ಆತನ ಪಕ್ಕದಲ್ಲಿ ಅಲ್ಲ. ಬೈಬಲಿನಲ್ಲಿ ದೇವರ ಚಿತ್ತವು ಎಷ್ಟರ ಮಟ್ಟಿಗೆ ದೊರೆಯುವುದು ಎಂಬುದನ್ನು ನೋಡುವಾಗ ನೀವು ಆಶ್ಚರ್ಯಪಡಬಹುದು. ಬೈಬಲು ಗುಣದ ಮತ್ತು ಪರಿಶುದ್ಧತೆಯ ಬಗ್ಗೆ ಇರುವುದು; ಅದು ನಾವು ಯಾರಾಗಿದ್ದೇವೆ ಎಂಬುದರ ಬಗ್ಗೆ ಇರುವುದು. ದೇವರ ಜ್ಞಾನವು ಜಾಣತನದ, ಬುದ್ಧಿವಂತಿಕೆಯ ಇಲ್ಲವೇ ವರದ ವಿಷಯವಾಗಿರುವದಿಲ್ಲ; ಅದು ನಡತೆಯ ವಿಷಯವಾಗಿರುತ್ತದೆ. "ಮೇಲಣಿಂದ ಬರುವ ಜ್ಞಾನವು ಮೊದಲು ಪರಿಶುದ್ಧವಾದದ್ದು, ಆ ಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದು. ಕರುಣೆ ಮುಂತಾದ ಒಳ್ಳೇ ಫಲಗಳಿಂದ ತುಂಬಿರುವಂಥದು ಆಗಿದೆ; ಅದರಲ್ಲಿ ಚಂಚಲವೂ ಕಪಟವೂ ಇಲ್ಲ" (ಯಾಕೋಬ 3:17). ಹಾಲಿನಿಂದ ಗಟ್ಟಿ ಆಹಾರದವರೆಗೆ ಬೆಳೆದ ಕ್ರೈಸ್ತರಿಗೆ ಅವರ ಭಾವನೆಗಳು ಒಳ್ಳೆಯದರ ಮತ್ತು ಕೆಟ್ಟದ್ದರ ಬೇಧಗಳನ್ನು ತಿಳಿದುಕೊಳ್ಳಲು ಪ್ರಯಾಸಪಟ್ಟಿರುತ್ತವೆ (ಇಬ್ರಿಯ 5:11-14). *ಮೊದಲು* ಪರಿಶುದ್ಧ ಬರಹಗಳಿಗೆ ಹೋಗಿರಿ! "ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟು ಕೊಂಡಿದ್ದೇನೆ" (ಕೀರ್ತನೆ 119:11).

ನಾವು ಎಲ್ಲಿ ಜೀವಿಸಬೇಕು ಇಲ್ಲವೇ ನಾವು ಯಾವ ಉದ್ಯೋಗ ಮಾಡಬೇಕು ಎಂಬುದನ್ನು ಬೈಬಲು ನಮಗೆ ಹೇಳುವದಿಲ್ಲ. ದೈವಿಕ ಪರಿಪಾಲನೆಯಂತೆ ದೇವರು ನಮಗೆ ಮಾರ್ಗದರ್ಶನ ಮಾಡುತ್ತಾನೆ. ಕೆಲವೊಂದು ದೇವರ ಚಿತ್ತವಾಗಿರಲಿಕ್ಕಿಲ್ಲ.

ಆದರೆ ಅದರಲ್ಲಿ ಆತನಿಗೆ ಒಂದು ಚಿತ್ತವಿರುತ್ತದೆ. ಆ ಚಿತ್ತವನ್ನು ನಾವು ತಿಳಿಯ ಬೇಕೆಂದು ಆತನು ಬಯಸುತ್ತಾನೆ. ಆತನ ಚಿತ್ತಕ್ಕೆ ವಿಧೇಯರಾಗಲು ಯಾವಾಗಲೂ ಆತನು ನಮಗೆ ಬಲವನ್ನು ಕೊಡುತ್ತಾನೆ. "ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸದೆಯೋ ಅವರಿಗೆ ಈ ಬೋಧನೆಯು ... ಗೊತ್ತಾಗುವದು" (ಯೋಹಾನ 7:17ಎ). ದೇವರ ಚಿತ್ತದ ಬಗ್ಗೆ ಯೋಚಿಸುತ್ತ ನಮ್ಮಲ್ಲಿ ಎಷ್ಟು ಜನರು ಪ್ರತಿದಿನ ಐದು ನಿಮಿಷಗಳನ್ನು ಕಳೆ ಯುವರು? ಆಳವಾಗಿ ಅಗಿಯಿರಿ ... ಪ್ರಾರ್ಥಿಸಿರಿ ... ಆಲಿಸಿರಿ ... ಗಮನಿಸಿರಿ. ಪ್ರಯತ್ನ ಮಾಡುವವರಿಗೆ ದೇವರು ತನ್ನನ್ನು ಪ್ರಕಟಿಸಿಕೊಳ್ಳುವನು. ದೇವರು ಬಯಸುವದನ್ನು ನೀನು ಇಂದು ಮಾಡದೇ ಇದ್ದರೆ, ಆತನು ನಾಳೆ ಏನು ಮಾಡಬೇಕೆಂದು ಬಯಸುತ್ತಾನೆ ಎಂಬುದನ್ನು ತೋರಿಸುವದನ್ನು ನೀನು ನಿರೀಕ್ಷಿಸಬೇಡ!

◇◇◇◇◇◇◇◇

# ಕೃಪಾವುಡಾ (ಸೇವಕತ್ವ)

## ಯೋಹಾನ 13:1-17, 34, 35

*"ನೀವು ಹಾಗಿರಬಾರದು; ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು. ಯಾವನು ಹೆಚ್ಚಿನವನು? ಊಟಕ್ಕೆ ಕೂತವನೋ ಸೇವೆ ಮಾಡುವವನೋ? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವವನಂತಿದ್ದೇನೆ" (ಲೂಕ 22:26, 27).*

ದೇವರು ಸೇವಕರನ್ನು ಮಾತ್ರವೇ ಉಪಯೋಗಿಸುತ್ತಾರೆ! ಇತರರು ಅರ್ಜಿಹಾಕಬೇಕಾಗಿರುವದಿಲ್ಲ. ಸೇವಕನ ಹೃದಯವು ಮನುಷ್ಯನು ಹೊಂದಿಕೊಳ್ಳುವಷ್ಟು ಸಮೀಪದಲ್ಲಿದೆ. ಯೇಸುವು *ಸೇವಕನಾಗಿದ್ದಾನೆ*! ನಾನು ಸೇವಕನ ಸೇವಕರ *ಸೇವಕನಾಗಿದ್ದೇನೆ*! ಬೈಬಲಿನ ಅನೇಕ ಮಹಾ ಪದಗಳು ಹಾಳು ಮಾಡಲ್ಪಟ್ಟಿವೆ. "ಶಿಲುಬೆ" ಎಂಬ ಪದವನ್ನು ಯೋಚಿಸಿರಿ. ಒಮ್ಮೆ ಕುರೂಪವಾದದ್ದು, ರಕ್ತಸಿಕ್ತವಾಕ್ತವಾದದ್ದು, ನೋವಿನಿಂದ ತುಂಬಿದ್ದು, ತಗ್ಗಿಸಿಕೊಳ್ಳುವಂತೆ ಮಾಡಿದ್ದು, ಕ್ರೂರವಾದದ್ದು, ಈಗ ಕಲಾತ್ಮಕವಾದದ್ದು, ಬಂಗಾರದ್ದು, ತೊಂದರೆ ಕೊಡದಂಥದ್ದು ಆಗಿದೆ. ಇಂದು ಜನರು ಶಿಲುಬೆಯಿಲ್ಲದ ಕ್ರಿಸ್ತನನ್ನು ಬಯಸುತ್ತಾರೆ. ಯೇಸುವನ್ನು ಹಿಂಬಾಲಿಸುವುದು ಶಿಲುಬೆಗೆ ಹೋಗುವುದಾಗಿದೆ. ಆತನು ತನ್ನ ಶಿಲುಬೆಯನ್ನು ಹೊತ್ತುಕೊಂಡನು; ನಾವು ನಮ್ಮದನ್ನು ಹೊರುತ್ತೇವೆ. ನಾವು ಸಾಯಬೇಕೆಂದು ಯೇಸುವು ಹೇಳುತ್ತಾನೆ. ಶಿಲುಬೆಯ ಅಪರಾಧವನ್ನು ನಾವು ಮರೆತುಬಿಡಬಾರದು (ನೋಡಿರಿ ಗಲಾತ್ಯ 5:11). "ಪ್ರೀತಿ" ಎಂಬ ಪದವನ್ನು ಯೋಚಿಸಿರಿ. ಈ ಮಹಾ ಪದವು ಭಾವನಾತ್ಮಕ ಹುಚ್ಚತನಕ್ಕೆ ಇಳಿಸಲ್ಪಟ್ಟಿದೆ. ಅದನ್ನು ಸರಿಪಡಿಸಲಿಕ್ಕೆ ನೀವು "ಕಠಿಣವಾದದ್ದನ್ನು" ಕೂಡಿಸಬೇಕು. "ಸೇವಕ" ಎಂಬ ಪದವನ್ನು ಯೋಚಿಸಿರಿ. ಬಂಧನದಲ್ಲಿರುವ ಗುಲಾಮನಿಗೆ ಹಕ್ಕುಗಳು, ಬಲವು ಇಲ್ಲವೇ ರಾಜಕೀಯವು ಇರುವದಿಲ್ಲ. ಅವನು ಸಂಪೂರ್ಣವಾಗಿ ಇನ್ನೊಬ್ಬನ ಸ್ವಾಸ್ತ್ಯದಲ್ಲಿರುವವನು ನಾವು ಈ ತತ್ವವನ್ನು ಭಾವಪ್ರಧಾನವಾದದ್ದನ್ನಾಗಿ ಮಾಡಿ, ಅದನ್ನು ಅರ್ಥವಿಲ್ಲದ್ದನ್ನಾಗಿ ಮಾಡಿರುತ್ತೇವೆ. ಯೇಸುವು ಜಗತ್ತಿಗೆ "ಕೃಪಾವುಡದ ಕ್ರಮವನ್ನು"

ಕೊಟ್ಟಿದ್ದಾನೆ. ಸಭೆಗಳನ್ನು ಕಟ್ಟುವದಕ್ಕೆ ಉಪಯೋಗಿಸಲು ದೇವರು ಕೊಟ್ಟಿರುವ ಉಪಕರಣವು ಒಂದು ಕೈಪಾವುಡ. ಇದು ಚರಿತ್ರೆಯಲ್ಲಿ ಅಂದಿನಿಂದ ಇಲ್ಲವೇ ಎಂದೂ ಮಾಡಲ್ಪಟ್ಟಿರುವದಿಲ್ಲ. ಮೇಲ್ಗಡೆಗಿನ ಮಾರ್ಗವು ಕೆಳಗಡೆಯದಾಗಿದೆ; ಕಡೆಯವರು ಮೊದಲಿಗರಾಗುವರು; ನೀನು ಜೀವಿಸುವದಕ್ಕಾಗಿ ಸಾಯುವಿ; ಹೊಂದಿಕೊಳ್ಳಲು ನೀನು ಕೊಡುವಿ (ಮತ್ತಾಯ 20:16; ಮಾರ್ಕ 9:35). ಕ್ರಿಸ್ತನಲ್ಲಿ ಪ್ರತಿಯೊಂದು "ಬುಡಮೇಲಾಗಿರುತ್ತದೆ."

ದೇವರು ಸೇವಕರನ್ನು ಮಾತ್ರವೇ ಉಪಯೋಗಿಸುತ್ತಾನೆ - "ಸಭೆಯ ಕೆಲಸದವರನ್ನು" ಅಲ್ಲ. "ಸಭೆಯ ಕೆಲಸದವರು" ಎಂಬುದು ಬೈಬಲಿನ ಮಾತಾಗಿರುವದಿಲ್ಲ. ನಾವೆಲ್ಲರೂ ಸೇವಕರಂತೆ ಗುರುತಿಸಲ್ಪಡಲು ಬಯಸುತ್ತೇವೆ, ಆದರೆ ನಮ್ಮಲ್ಲಿ ಯಾರೂ ಸೇವಕರಂತೆ ನಡಿಸಲ್ಪಡಲು ಬಯಸುವದಿಲ್ಲ. ಜನರು ಸೇವಕರಾಗಲು ಸಾಲುಗಟ್ಟಿ ನಿಲ್ಲುವದಿಲ್ಲ. ಉಪಯೋಗಿಸಲು ನೀವೆಂದೂ ದೇವರಿಗೆ ಚಿಕ್ಕವರಾಗಿರುವದಿಲ್ಲ, ಆದರೆ ನೀವು ಬಹಳ ದೊಡ್ಡವರಾಗಬಹುದು! ಹನ್ನೆರಡು ಜನರಿಗೆ ಯೇಸುವು ಕೊಟ್ಟ ಪ್ರಾಯೋಗಿಕ ಪಾಠವು "ಕೈಪಾವುಡದ ಪಾಠವಾಗಿತ್ತು." ತಾನು ಮಾಡಿದ್ದನ್ನು ಅವರು ಮಾಡಬೇಕೆಂದು ಅವರಿಗೆ ಬೋಧಿಸಿದನು. ಪ್ರತೀ ಸಲ ಹನ್ನೆರಡು ಜನರು ತಮ್ಮನ್ನು ಮೇಲಕ್ಕಿಟ್ಟುಕೊಂಡಿದ್ದಾಗ, ಯೇಸುವು ಅವರನ್ನು ಗದರಿಸಿದನು (ಮಾರ್ಕ 10:35-45). ಕ್ರೈಸ್ತರಾಗಿರುವವರು ಸೇವಕರಾಗಿರುವರು; ಸೇವೆಯು ಕ್ರೈಸ್ತರು ಮಾಡುವಂಥದ್ದಾಗಿರುವುದು. ನಾವು "ಯಶಸ್ಸುಳ್ಳ ಸಭೆಯಾಗಿರುವದಕ್ಕಿಂತ" ಹೆಚ್ಚಾಗಿ "ಸೇವಕ ಸಭೆಯಾಗಿರತಕ್ಕದ್ದು." ಕೃತಜ್ಞತೆಯು ದೀನತೆಯ ತಾಯಿಯಾಗಿರುತ್ತದೆ. ದೀನತೆಯು ನಮ್ಮನ್ನು ಅಧೀನರನ್ನಾಗಿ ಮಾಡುತ್ತದೆ. ಈಗ ನಾವು ದೇವರೊಂದಿಗೆ ನಮ್ಮ ಅನುದಿನದ ನಡೆಯುವಿಕೆಯ ತಿರುಳಿಗೆ ಬರುತ್ತೇವೆ: *ಸೇವಕತ್ವ!* ನಾವು "ಕೈಪಾವುಡವನ್ನು ಎತ್ತಿಕೊಳ್ಳುತ್ತೇವೆಯೋ"?

## ಗರ್ವದ ಮನಸ್ಸುಗಳು ಮತ್ತು ಕೊಳೆಯಾದ ಪಾದಗಳು

ಯೋಹಾನ 13 ಒಂದು ಆಶ್ಚರ್ಯಕರವಾದ ಅಧ್ಯಾಯವಾಗಿದೆ. ಮನುಷ್ಯನು ಬೈಬಲನ್ನು ಬರೆಯಲಾರನು; ಅವನು ಬರೆಯಬಹುದಾದರೂ ಬರೆಯಲಾರನು. ಯೋಹಾನ 13ರ ಹಿನ್ನೆಲೆಯು ಕಡೆಯ ಭೋಜನದ ಸಮಯದಲ್ಲಿ "ಮೇಲಂತಸ್ತಿನ ಕೋಣೆಯಾಗಿದೆ." ಮತ್ತಾಯ, ಮಾರ್ಕ, ಮತ್ತು ಲೂಕರು ಕರ್ತನ ಭೋಜನದ ಸ್ಥಾಪನೆಯನ್ನು ಪ್ರಕಟಿಸುತ್ತಾರೆ. ಇದು ಯೋಹಾನನಲ್ಲಿ ಇರುವದಿಲ್ಲ. ಯೋಹಾನ 13ರಲ್ಲಿ, ಯೋಹಾನನು "ಕೈಪಾವುಡದ" ಬಗ್ಗೆ ಹೇಳಿದ್ದಾನೆ. ಮತ್ತಾಯ, ಮಾರ್ಕ ಇಲ್ಲವೇ ಲೂಕರಲ್ಲಿ ಕೈಪಾವುಡ ಇರುವದಿಲ್ಲ. ಯೋಹಾನನು ಈ ಘಟನೆಯ ಮಾನವ ಭಾಗವನ್ನು ಮತ್ತು ದೇವರ ಸನ್ನಿಧಾನದ ವಿರಳವಾದ ದೃಷ್ಟಿಕೋನವನ್ನು ನಮ್ಮೊಂದಿಗೆ ಹಂಚಿಕೊಳ್ಳುವ ಅವಕಾಶವನ್ನು ಹೊಂದಿದ್ದಾನೆ.

ಶಿಲುಬೆಯ ನೆರಳಿನ ಕೆಳಗೆ, ಶಿಷ್ಯರು ಚರ್ಚಿಸುತ್ತಿದ್ದರು: "ಯಾರು ಬಹಳ ದೊಡ್ಡವನು?" ಯಾರು "MVA" (Most Valuable Apostle)? ಯೆರೆಮೀಯನು ಇಸ್ರಾಯೇಲ್ಯರಿಗೆ (ಯೆಹೂದ್ಯರಿಗೆ) ದೊಡ್ಡ ವೈಯಕ್ತಿಕ ಸಂಗತಿಗಳನ್ನು ಹುಡುಕಬಾರದೆಂದು ಬೋಧಿಸಿದನು (ಯೆರಮೀಯ 45:5). ಇದು ಕಲಿಯಲಿಕ್ಕೆ ಕಠಿಣವಾದ ಪಾಠವಾಗಿತ್ತು; "... [ಯೇಸುವು] ಅಂತ್ಯದ ವರೆಗೆ ಅವರನ್ನು ಪ್ರೀತಿಸಿದನು" ಎಂದು ಯೋಹಾನ 13:1 ಹೇಳುತ್ತದೆ. ಆತನ ಅಂತಿಮ ಪ್ರೀತಿಯು ಕಹಿಯಾದ ಅಂತ್ಯದ ವರೆಗೆ ಮುಂದುವರಿಯಿತು. ಶಿಲುಬೆಯ ಬಳಿಯಲ್ಲಿ ಯೇಸುವು ತನ್ನ ಶಿಷ್ಯರ

ಅಗತ್ಯತೆಯುಳ್ಳವನಾದಾಗ, ಅವರು ಗರ್ವದಿಂದ ತುಂಬಿಕೊಂಡಿದ್ದರು - ಅವರು ಚರ್ಚೆ ಮಾಡುತ್ತಿದ್ದರು. ಇನ್ನೂ, ಆತನು ಅವರನ್ನು ಪ್ರೀತಿಸಿದನು. ಆತನು ಅವರನ್ನು ಜರಿಯಲಿಲ್ಲ. ಅವರ ಕಡೆಗೆ ಬೆರಳು ತೋರಿಸಲಿಲ್ಲ, ಇಲ್ಲವೇ "ಇಡೀ ಒಂದು ಹೊಸ ಗುಂಪಿಗಾಗಿ" ದೇವರನ್ನು ಬೇಡಿಕೊಳ್ಳಲಿಲ್ಲ, "ಪಂಚಾಶತ್ತಮ ದಿನವು ಹತ್ತಿರವಾಗಿದೆ, ತಂದೆಯೇ. 'ಈ ಗುಂಪಿನೊಂದಿಗೆ' ನಾವು ಹೇಗೆ ಸಭೆಯನ್ನು ಪ್ರಾರಂಭಿಸಬಹುದು?" ಎಂದು ಆತನು ಹೇಳಲಿಲ್ಲ. ಯೇಸುವು ಮೇಲಿನ ಯಾವುದನ್ನೂ ಹೇಳಲಿಲ್ಲ. ಆತನು ಬೋಗುಣಿಯನ್ನು ನೀರಿನಿಂದ ತುಂಬಿಸಿ. ಅವರ ಪಾದಗಳನ್ನು ತೊಳೆಯುವದಕ್ಕಾಗಿ, ಕೈಪಾವುಡದಿಂದ ತನ್ನ ನಡುವಿಗೆ ಕಟ್ಟಿಕೊಂಡನು. ಈ ವೃತ್ತಾಂತವನ್ನು ನಾನು ಓದುವಾಗ, "ಯೇಸುವೇ, ಅದನ್ನು ಮಾಡಬೇಡ. ಅವರು ನಿನ್ನ ಪಾದಗಳನ್ನು ತೊಳೆಯುವಂತೆ ಮಾಡು!" ಎಂದು ಯೋಚಿಸುತ್ತೇನೆ. ಮಾನವತೆಯು ಸೋತುಹೋಯಿತು.

ಹೀಗಿದ್ದರೂ, ದೇವರು ಸೋತುಹೋಗಲಿಲ್ಲ. ಯೋಹಾನನು 13ನೆಯ ಆಧ್ಯಾಯದಲ್ಲಿ ಆ ರಾತ್ರಿಯನ್ನು ಹಿಂದಿರುಗಿ ನೋಡಿದನು. ಯೋಹಾನನನ್ನು ಆಮೂಲಾಗ್ರವಾಗಿ ಯಾವುದು ಬದಲಾಯಿಸಿತು? ಆತನು ಯೇಸುವಿನಲ್ಲಿ ಸರ್ವಶಕ್ತನಾದ ದೇವರು - ತನ್ನ ಮೊಣಕಾಲೂರಿಕೊಂಡು, ಶಿಷ್ಯರ ಪಾದಗಳನ್ನು ತೊಳೆಯುವದನ್ನು ನೋಡಿದನು! ಪಾದತೊಳೆಯುವ ಆತಿಥ್ಯ ಮಾಡಬೇಕೆಂಬುದನ್ನು ಶಿಷ್ಟಮಾರ್ಗವು ಕೇಳಿತು. ಸ್ಥಾನಕ್ಕಾಗಿ ಹೊಡೆದಾಡುತ್ತಿದ್ದ ಗರ್ವಿ ಜನರು ಅದನ್ನು ಮಾಡಲಾರದವರಾಗಿದ್ದರು, ಆದುದರಿಂದ ಯೇಸುವು ಮಾಡಿದನು! ದೇವರು ಸೇವಕರುಗಳನ್ನು ಬಯಸುತ್ತಾನೆ; ಜನರು "ತಾರೆಗ ಳಾಗಿರಲು" ಬಯಸುತ್ತಾರೆ. ನೀನು ಸೇವೆ ಮಾಡುವದನ್ನು ನಿಲ್ಲಿಸುವಾಗ, ನೀನು ದೂರು ಹೇಳಲು ಪ್ರಾರಂಭಿಸುವಿ! ಠೀಕೆ ಮಾಡುವವರು ಸೇವೆ ಮಾಡುವದಿಲ್ಲ!

ಸೇವಕರು ಪಾದಗಳನ್ನು ತೊಳೆಯುವರು, *ಅವಧಿ!* ಯಾರ ಪಾದಗಳನ್ನು ತೊಳೆಯಬೇಕೆಂಬುದನ್ನು ಅವರು ಆಯ್ಕೆ ಮಾಡಿಕೊಳ್ಳುವದಿಲ್ಲ. ಯೇಸುವು ಯೂದನ ಪಾದಗಳನ್ನು ತೊಳೆದನು (ತೊಳೆದಿರ ಬಹುದು). ಪಾದ ತೊಳೆಯುವದರಲ್ಲಿ ಯಾವ ಭಕ್ತಿ ಶ್ರದ್ಧೆಯಿರುವದಿಲ್ಲ. ಯೆಹೂದಿ ಬಾಲಕರು ಗುಲಾಮರಾಗಿರಬಹುದು; ಹೀಗಿದ್ದರೂ, ಪಾದ - ತೊಳೆಯುವದರಿಂದ ಅಲ್ಪರಾಗಿ ಮಾಡಲ್ಪಡುವದಿಲ್ಲ ಎಂದು ಅಖಿತ ಯೆಹೂದಿ *ಮಿಶ್ನಾ* ಹೇಳುತ್ತದೆ. ಯೇಸುವು ಸೇವಕರುಗಳೊಂದಿಗೆ ಮಾತ್ರವೇ ಗುರುತಿಸಿಕೊಳ್ಳಲಿಲ್ಲ. ಆದರೆ ಸೇವಕರಲ್ಲಿ ಕನಿಷ್ಠರಾದವರೊಂದಿಗೂ ಗುರುತಿಸಿಕೊಂಡನು. ಸಿದ್ಧಪಡಿಸಿ ತೋರಿಸಲಿಕ್ಕೆ ಸೇವಕರಲ್ಲಿ ಏನೂ ಇರಲಿಲ್ಲ; ಅವರಿಗೆ ಕಳೆದುಕೊಳ್ಳಲೂ ಏನೂ ಇರುವದಿಲ್ಲ. ಯೇಸುವು ಕೈಪಾವುಡದಿಂದ ತನ್ನ ನಡುವಿಗೆ ಕಟ್ಟಿಕೊಂಡನು. ಆತನ ಸಂದೇಶವು "ನಾನು ನಿನ್ನ ಸೇವಕನಾಗಿರತಕ್ಕದ್ದು, ಯಾಕಂದರೆ ನಾನು ಆತನವನಾಗಿದ್ದೇನೆ" ಎಂಬುದಾಗಿತ್ತು. ಕ್ರೂಜೀತನಾದ ರಕ್ಷಕನು ಕ್ರೂಜಿತರಾದ ಸೇವಕರನ್ನು ಮಾತ್ರವೇ ಉಪಯೋಗಿಸಬಲ್ಲನು.

ರಕ್ತಸುರಿಸಿದ ಸಭೆಯು ಆಶೀರ್ವದಿಸಲಾರದು.
ಸೇವೆಮಾಡದ ಸಭೆಯು ರಕ್ಷಿಸಲಾರದು.
ಶ್ರಮೆ ತಾಳದ ಸಭೆಯು ವಿಮೋಚಿಸಲಾರದು.
ಸಾಯಲಾರದ ಸಭೆಯು ಜೀವಿಸಲಾರದು.

## “ಪೇತ್ರನ ತತ್ವ”[1]

ಶಿಷ್ಯರ ಮಾನವತೆಯು *ಗರ್ವದಲ್ಲಿ* ವ್ಯಕ್ತಪಡಿಸಲ್ಪಟ್ಟಿತು! ದೇವರ ದೈವಿಕತೆಯು *ದೀನತೆಯಲ್ಲಿ* ವ್ಯಕ್ತಪಡಿಸಲ್ಪಟ್ಟಿತು! ಇದು ಪೇತ್ರನ ಅತ್ಯುತ್ತಮತೆಯಲ್ಲಿ ಕಂಡು ಬರುತ್ತದೆ. ಬಹುಶಃ ಅವನು ಬೈಬಲಿನಲ್ಲಿ ಬಹಳ ಮೂಕವಾದ ಪ್ರಶ್ನೆಯನ್ನು ಕೇಳಿದನು: “ಕರ್ತನೇ, ನೀನು ನನ್ನ ಪಾದಗಳನ್ನು ತೊಳೆಯಬಹುದೋ?” (ಯೋಹಾನ 13:6ಬಿ). ಯೇಸುವು, ಒಂದು ಬೋಗುಣಿಯಲ್ಲಿ ನೀರು ಮತ್ತು ಕೈಪಾವುಡದೊಂದಿಗೆ ಪಾದಗಳನ್ನು ತೊಳೆಯುತ್ತಿದ್ದನು, ಮತ್ತು ಅದು ಪೇತ್ರನ ಸರತಿಯಾಗಿತ್ತು. ಪೇತ್ರನು ಈ ಪ್ರಶ್ನೆಯನ್ನು ಯಾಕೆ ಕೇಳಿದನು?

(1) ಪೇತ್ರನಿಗೆ ಸುಳ್ಳು ಆತ್ಮೀಕತೆಯೊಂದಿಗೆ ಒಂದು ಸಮಸ್ಯೆಯಿತ್ತು. ಇತರರಿಗಿಂತ ತಾನು ಹೆಚ್ಚು ಒಳ್ಳೆಯವನೆಂಬುದನ್ನು ತೋರಿಸಿಕೊಡಲು ಬಯಸಿದನು. ದೀನತೆಯಂತೆ ಕಾಣಲು ಪ್ರಯತ್ನಿಸುವ ಗರ್ವ ಅದಾಗಿತ್ತು. ಇದು ಪೇತ್ರನ ಹೃದಯವನ್ನು ಪ್ರಕಟಿಸಿತು. ತನ್ನ ಪಾದಗಳು ತೊಳೆಯಲ್ಪಡಬೇಕೆಂದು ಅವನು ಯೋಚಿಸಲಿಲ್ಲ! ಯೇಸುವು ಕೊಳೆಯಾದ ಪಾದಗಳನ್ನು ಮಾತ್ರವೇ ತೊಳೆಯುವನು. ಪೇತ್ರನು ಒಬ್ಬ ನಾಯಕನಾಗಿದ್ದನು; ಅವನು ತಪ್ಪುಗಳನ್ನು ಒಪ್ಪಿಕೊಳ್ಳಲು ಬಯಸಲಿಲ್ಲ. ತನ್ನ ರೂಪವು ಹೊಳೆಯಬೇಕೆಂದು ಅವನು ಬಯಸಿದನು. “ಸೋಗು ಮಾಡುವುದು” ಧಾರ್ಮಿಕವಾಗಿ ಯಾವಾ ಗಲೂ ನಾಶಕರವಾದದ್ದಾಗಿದೆ. ಪೇತ್ರನು ಅಕ್ಷರಶಃವಾಗಿ “ತನ್ನನ್ನು ಮೂರ್ಖನನ್ನಾಗಿ” ಮಾಡಿಕೊಂಡನು. ಗರ್ವವು ಯಾವಾಗಲೂ ಜನರಿಗೆ ಅದನ್ನು ಮಾಡುತ್ತದೆ. ಪೇತ್ರನ ಪಾದಗಳು ಕೊಳೆಯಾಗಿದ್ದವು; ಬೇರೆ ಪ್ರತಿಯೊಬ್ಬರಂತೆ ಅವುಗಳಿಗೆ ತೊಳೆಯುವಿಕೆಯ ಅವಶ್ಯಕತೆಯಿತ್ತು. “ನಾನು ಸಹಾಯದ ಮೇಲೆ ಇಲ್ಲ” ಎಂದು ನಮಗೆ ಗರ್ವದ ಮನೋಭಾವನೆ ಇರಬಹುದು. ಹೌದು, ನೀನಾಗಿರುವಿ! ನಾವೆಲ್ಲರೂ ಆಗಿದ್ದೇವೆ. ನಮ್ಮೆಲ್ಲರಿಗೂ ಪಾದಗಳ ತೊಳೆಯುವಿಕೆಯ ಅವಶ್ಯಕತೆಯಿದೆ. ಪೇತ್ರನ ಹೃದಯದಲ್ಲಿಯ ಇನ್ನೊಂದು ಒಳನೋಟವು, “ನಾನು ನನ್ನ ಸ್ವಂತ ಪಾದವನ್ನು ತೊಳೆದುಕೊಳ್ಳಬಲ್ಲೆನು” ಎಂಬ ಮನೋಭಾವನೆಯಿಂದ ಬರುತ್ತದೆ. “ಕೃತ್ಯಗಳ ರಕ್ಷಣೆಗಾಗಿ!” ಒಂದು ಅಪೇಕ್ಷೆಯು (ಸ್ವನೀತಿಯು) ನಮ್ಮನ್ನು ಪೀಡಿಸುತ್ತದೆ. “ನನಗೆ ಯಾರ ಅವಶ್ಯಕತೆಯೂ ಇರುವದಿಲ್ಲ!” ಎಂದು ನಾವು ಯೋಚಿಸುತ್ತೇವೆ. ಹೌದು, ನೀವು ಮಾಡುತ್ತೀರಿ! ಪ್ರತಿಯೊಬ್ಬನಿಗೂ ಯೇಸುವಿನ ಅಗತ್ಯತೆಯಿದೆ. ನಮಗೆ ಒಬ್ಬರೊಬ್ಬರ ಅಗತ್ಯತೆಯಿದೆ: ಕ್ರೈಸ್ತತ್ವವು ಕೇವಲ ಇನ್ನೊಂದು “ಹೇಗೆ” ಎಂಬ ಧರ್ಮವಾಗಿರುವದಿಲ್ಲ. ಕ್ರೈಸ್ತತ್ವವು “ನಿನ್ನಷ್ಟಕ್ಕೆ ನಿನ್ನ ಕೆಲಸಮಾಡು” ಎಂಬುದಾಗಿರುವದಿಲ್ಲ. “... ನಾನು ಬಲಹೀನನಾಗಿರುವಾಗ, ನಾನು ಬಲವುಳ್ಳವನಾಗಿರುವೆನು” ಎಂಬುದನ್ನು ಪೌಲನು ಕಲಿತುಕೊಂಡನು (2 ಕೊರಿಂಥ 12:10). ಯೇಸುವಿಗಾಗಿ ನಾವೆಂದೂ ನಮ್ಮ ಅಗತ್ಯತೆಯನ್ನು ಮೀರಿ ಹೋಗುವದಿಲ್ಲ. ರೊಟ್ಟಿಯನ್ನು ಹುಡುಕುವ ಭಿಕ್ಷಕರಂತೆ ನಾವಾಗಿದ್ದೇವೆ. ತಪ್ಪುಗಳು ತಿಳಿಸಲ್ಪಟ್ಟಾಗ ಸಹೋದರರು ಸಭೆಯನ್ನು ಬಿಟ್ಟು ಹೋಗಬೇಕೆಂಬುದು ನನಗೆ ಇನ್ನೂ ಆಶ್ಚರ್ಯವನ್ನುಂಟು ಮಾಡುತ್ತದೆ. ನಾವೆಲ್ಲರೂ ಪಾಪ ಮಾಡುತ್ತೇವೆ ಮತ್ತು ದೇವರ ಮಹಿಮೆಯನ್ನು ಹೊಂದದೆ ಹೋಗುತ್ತೇವೆ (ರೋಮಾಪುರ 3:10, 23).

(2) ಪೇತ್ರನು ಯೇಸುವನ್ನು “ಕಾಪಾಡಲು” ಪ್ರಯತ್ನಿಸುತ್ತಿದ್ದನು. “ಸ್ವರೂಪವು” ಹೊಸದಾಗಿರಲಿಲ್ಲ! ರಬ್ಬಿಗಳು ಕೆಲವೊಂದು ಸ್ಥಳಗಳಿಗೆ ಹೋಗಲಿಲ್ಲ. ಕೆಲವೊಂದು ಸಂಗತಿಗಳನ್ನು ಮಾಡಲಿಲ್ಲ, ಕೆಲವೊಂದು ಜನರೊಂದಿಗೆ ಕಂಡುಕೊಳ್ಳಲಿಲ್ಲ. ಯೇಸುವು “ರಬ್ಬಿ ಶಾಲೆಗೆ” ಎಂದೂ ಹೋಗಲಿಲ್ಲ. ಆತನು ತನ್ನ ಕುಟುಂಬವನ್ನು, ತನ್ನ ಶಿಷ್ಯರನ್ನು ಮತ್ತು ತನ್ನ ಜನಾಂಗವನ್ನು ದುರ್ಬಲ ಉದ್ವೇಗದಲ್ಲಿ ಇಟ್ಟನು. ಪೇತ್ರನ ಕಣ್ಣುಗಳಲ್ಲಿ,

ಯೇಸುವಿನ ಪ್ರತಿಷ್ಠೆಯು, ಈ ಕೃಪಾವುಡದ ಸಂಗತಿಯು ಬಹಿರಂಗಪಡಿಸಲ್ಪಟ್ಟರೆ ಹಾಳಾಗುವಂತೆ ಇತ್ತು. ದೇವರಿಗಿಂತ ಹೆಚ್ಚು ಧಾರ್ಮಿಕರಾಗಿರಲು ಪ್ರಯತ್ನಿಸಬೇಡ! ದೇವರಕ್ಕಿಂತ ಹೆಚ್ಚು ಕಠಿಣವಾಗಿರುವ ಮತ್ತು ಕೋರಿಕೆಯುಳ್ಳ ತಮ್ಮ ಸುಳ್ಳು ಆತ್ಮಿಕತೆಯಿಂದ ನನ್ನನ್ನು ಜನರು ಹೆದರಿಸುತ್ತಾರೆ. ಯೇಸುವು ಪಾಪಿಗಳಿಗೆ ದಯೆಯುಳ್ಳ ವನಾಗಿದ್ದನು; ಆತನು ಮಕ್ಕಳನ್ನು ಆಶೀರ್ವದಿಸಿದನು, ಮತ್ತು ಸಾಮಾನ್ಯ ಜನರಿಂದ ಕೇಳಲ್ಪಟ್ಟನು. ಕ್ರಿಸ್ತನಿಗೆ ಪಾಪಿಗಳನ್ನು ಮಾರ್ಪಡಿಸುವಾಗ, ಈ ಎಚ್ಚರಿಕೆಯನ್ನು ನಾವು ಕೊಡುವ ಅಗತ್ಯತೆಯಿದೆ: "ನೀವು ಮೆಚ್ಚಿಕೊಳ್ಳದ ಸಂಗತಿಗಳನ್ನು ಯೇಸುವಿನ ಬಗ್ಗೆ ನೀವು ಸ್ವೀಕರಿಸಿಕೊಳ್ಳಬೇಕಾಗುವುದು." ನಾವು ಯೇಸುವಿನಂತೆ ಆಗಲು ಬದಲಾಗುತ್ತೇವೆ; ಆತನು ನಮ್ಮಂತಾಗಲು ಬದಲಾಗುವದಿಲ್ಲ. ಪೇತ್ರನು "ಸೇವ ಕನಿಗಿಂತ" ಒಬ್ಬ "ಸಭೆಯ ಕೆಲಸದವನಂತೆ" ಇರುವದರ ಉದಾಹರಣೆಯಾಗಿದ್ದಾನೆ. ಆವನು ನಿಯಂತ್ರಣದಲ್ಲಿದ್ದನು, ಮತ್ತು ಅವನು ನಿಯಂತ್ರಣದಲ್ಲಿರಲು ಬಯಸಿದನು. ಬಲಶಾಲಿಗಳು ಮಾತ್ರವೇ ದೀನತೆಯುಳ್ಳವರಾಗ ಬಹುದು; ಸುರಕ್ಷಿತರಾಗಿರುವವರು ಸೇವೆ ಮಾಡಬಲ್ಲರು. ವಿಷಯವು ಗುಣಲಕ್ಷಣವಾಗಿದೆ, ಪ್ರತಿಭೆಯಲ್ಲ.

(3) ಪೇತ್ರನ ಗರ್ವವು ತೋರಿಸಲ್ಪಟ್ಟಿತು. ನನ್ನ ಗರ್ವವನ್ನು ನಾನು ಜಯಿಸಿದೆನೆಂದು ಯೋಚಿಸುವಾಗ, ಅದು ತನ್ನ ಬಲವಾದ ತಲೆಯನ್ನು ತೋರಿಸುತ್ತದೆ. ಪರಿಶುದ್ಧ ಬರಹಗಳಲ್ಲಿ ಪರಿಚಿತವಾದದ್ದನ್ನು ಹೆಚ್ಚು ಸಮೀಪದಿಂದ ಓದುವ ಅಗತ್ಯತೆಯಿರುತ್ತದೆ. ಯೇಸುವಿನ ಪಾದವನ್ನು ಶಿಷ್ಯರು ತೊಳೆಯುವುದು ವಿಷಯವಾಗಿರುವದಿಲ್ಲ; ಯೇಸುವು ಅವರ ಪಾದಗಳನ್ನು ತೊಳೆಯುವುದು ವಿಷಯವಾಗಿದೆ! ಆತನ ಪಾದಗಳನ್ನು ತೊಳೆಯಲು ಅವರು ಮುಂದಾಗಬಹುದಿತ್ತು! ಅದು ಒಂದು ಸಮಸ್ಯೆಯಾಗುತ್ತಿರಲಿಲ್ಲ. ಅವರು ಅದರ ಮೇಲೆ ಜಗಳಮಾಡಬಹುದಿತ್ತು. ಗರ್ವವು ಅಷ್ಟು ಮೋಸಕರವಾದದ್ದಾಗಿರುತ್ತದೆ. ವರ್ಷಗಳಿಂದ ನಾವು ಪ್ರತಿಯೊಬ್ಬ ಡೀಕನರಿಗೆ ಒಂದು "ಸೇವಕ ಕೃಪಾವುಡವನ್ನು" ಕೊಟ್ಟಿದ್ದೇವೆ. ಇನ್ನೊಬ್ಬನನ್ನು "ಕೃಪಾವುಡದ ಸೇವಕರನ್ನಾಗಿ" ಮಾಡಿರಿ ಎಂದು ಅವರನ್ನು ಕೇಳಿಕೊಂಡೆವು. ಅವರು ಹಾಗೆ ಮಾಡಿದರು ಕಾಲಕಾಲಕ್ಕೆ, ನಮಗೆ "ಕೃಪಾವುಡ ಭಾನುವಾರವಿತ್ತು." ಕೃಪಾವುಡಗಳು ವಿಶೇಷ ಸೇವಕರುಗಳಿಗೆ ಕೊಡಲ್ಪಟ್ಟವು. ಅದು ಸತ್ಯವಾಗಿರದಷ್ಟು ಒಳ್ಳೆಯದಾಗಿತ್ತು. ಜನರು ಕೃಪಾವುಡಗಳನ್ನು ಹೊಂದಿಕೊಳ್ಳಲು ರಾಜಕೀಯವನ್ನು ಉಪಯೋಗಿಸಿದರು, ಕೃಪಾವುಡಗಳ ಮೇಲೆ ಜಗಳ ಮಾಡಿದರು, ತಮ್ಮ ಕೃಪಾವುಡಗಳನ್ನು ಪ್ರದರ್ಶಿಸಿದರು! ಕೃಪಾವುಡಗಳ ಹಿಂದೆ ಇದ್ದ ವಿಚಾರವನ್ನು ಗರ್ವವು ಹಾಳುಮಾಡಿತು!

ಮುಂದಿನ ಭಾನುವಾರ ತಾವು ನಿನ್ನ ಪಾದಗಳನ್ನು ತೊಳೆಯುತ್ತೇವೆಂದು ಸಭಾಹಿರಿಯರು ಪ್ರಕಟಿಸಿದರೆ ನೀನು ಏನು ಮಾಡುವಿ? ಹೊಸ ಸೂಟನ್ನು, ಹೊಸ ಶೂಗಳನ್ನು, ಹೊಸ ಟೈಯನ್ನು ನೀನು ಕೊಂಡುಕೊಳ್ಳುವಿ! ನೀನು ಸ್ನಾನ ಮಾಡುವಿ. ನಿನ್ನ ಕುಟುಂಬವನ್ನೂ ಸ್ನೇಹಿತರನ್ನೂ ಕರೆದುಕೊಂಡು ಬರುವಿ! ನೀನು ಅದನ್ನು ಹಾಳು ಮಾಡುವಿ! *ಗರ್ವ!* ಒಂದು ಭಾನುವಾರ ಅವರು ನಿನ್ನನ್ನು ಆಶ್ಚರ್ಯಗೊಳಿಸಿದರೆ ಏನಾಗುತ್ತದೆ? ನಿನ್ನ ಶೂಗಳನ್ನು ಅವರು ತೆಗೆದಾಗ ನಿನ್ನ ಕಾಲುಚೀಲದಲ್ಲಿ ಒಂದು ತೂತನ್ನು ಕಂಡುಕೊಳ್ಳ ಬಹುದು. ನೀನು ತಗ್ಗಿಸಲ್ಪಡುವೆಯೋ? *ಗರ್ವ!* ಅದು ಪೇತ್ರ ನಲ್ಲಿ ಇತ್ತು; ಅದು ನಮ್ಮಲ್ಲಿ ಉಳಿದುಕೊಂಡೇ ಇರುತ್ತದೆ.

(4) ಪೇತ್ರನು ತನ್ನನ್ನು ತಗ್ಗಿಸಿಕೊಂಡು ಮಾನಸಾಂತರ ಪಟ್ಟನು, "ಕರ್ತನೇ, ನನ್ನ ಪಾದಗಳನ್ನು ಮಾತ್ರವೇ ತೊಳೆಯಬೇಡ, ನನ್ನ ತಲೆಯನ್ನೂ ಸಹ ತೊಳೆ" ಎಂದು ಹೇಳಿದನು (ಯೋಹಾನ 13:9). ನಮಗೆ ಪೇತ್ರನ ಉದಾಹರಣೆಯ ಅಗತ್ಯತೆ

ಇದೆ. ಅವನು ಪಾಪ ಮಾಡಿದನು, ಹೌದು, ಅವನು ಮಾನಸಾಂತರವನ್ನೂ ಪಟ್ಟನು. ಇನ್ನೊಬ್ಬನ ಪಾದಗಳನ್ನು ತೊಳೆಯುವುದು ನಿಮ್ಮ ಸ್ವಾತಂತ್ರ್ಯವನ್ನು ಘೋಷಿಸಬಹುದು; ನಿನ್ನ ಪಾದಗಳು ತೊಳೆಯಲ್ಪಟ್ಟದ್ದು ನಿಮ್ಮ ಅವಲಂಭನೆಯನ್ನು ಘೋಷಿಸುತ್ತದೆ. ಸೇವೆ ಮಾಡುವದಕ್ಕಿಂತ ಸೇವೆ ಮಾಡಿಸಿಕೊಳ್ಳುವುದು ನಮಗೆ ಕಠಿಣವಾದದ್ದಾಗ ಬಹುದು. ತಂದೆ ತಾಯಿಗಳೇ, ನಿಮ್ಮ ಮಕ್ಕಳು ನಿಮಗೆ ಕೊಡಲಿ! ಬಲವಾದ ಸದಸ್ಯರೇ, ಸಹೋದರರು ನಿಮಗೆ ಕೊಡಲಿ.

ಇದನ್ನು ನಾನು, "ಯೆಥೋಚಿತ್ತವಲ್ಲದವರ" ಎಂದು ಕರೆಯುತ್ತೇನೆ. ನಮ್ಮಲ್ಲಿ ಯಾರೂ ಪ್ರಸಂಗಿಸಲು ಇಲ್ಲವೇ ಸೇವೆ ಮಾಡಲೂ ಸಹ ಹಕ್ಕನ್ನು ಸಂಪಾದಿಸಿಕೊಂಡಿರುವದಿಲ್ಲ. ಪಂಚಾಶತ್ತಮ ದಿನದಂದು ಆ ದೊಡ್ಡ ಪ್ರಸಂಗವನ್ನು ಯಾರು ಪ್ರಸಂಗಿಸಿದರು? *ಪೇತ್ರನು!* ಅವನು ಹಕ್ಕನ್ನು ಸಂಪಾದಿಸಿಕೊಂಡಿದ್ದನೋ? *ಇಲ್ಲ!* ಪ್ರಸಂಗಿಸುವ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದಿದ್ದನೋ? *ಇಲ್ಲ!* ಪೇತ್ರನು ಪಂಚಾಶತ್ತಮದ ದಿನದಂದು ಪ್ರಸಂಗಿಸಲು ದೇವರಿಂದ ಕೃಪೆಯನ್ನು ಹೊಂದಿದನು, ಯಾಕಂದರೆ ಕೊನೆಯ ಭೋಜನದಲ್ಲಿ ಯೇಸುವು ತನ್ನ ಪಾದಗಳನ್ನು ತೊಳೆಯುವದಕ್ಕೆ ಯೇಸುವನ್ನು ಬಿಟ್ಟಿದ್ದನು! ಪ್ರಸಂಗಿಸಲು ನಾನು ಯಾರು? ನಾನು ಒಬ್ಬನಾಗಿರುವದಿಲ್ಲ! ನಾನು ಒಬ್ಬನಾಗಿರಲಾರೆನು! ಹೀಗಿದ್ದರೂ, ನಾನು ನನ್ನನ್ನು ತಗ್ಗಿಸಿಕೊಂಡಿರುವವರೆಗೆ, ಯೇಸುವು ನನ್ನ ಪಾದಗಳನ್ನು ತೊಳೆಯಲು ಬಿಡುವವರೆಗೆ, ನಾನು ಯಾರಿಗಾದರೂ, ಎಲ್ಲಿಯಾದರೂ ಯಾವುದೇ ಸಮಯದಲ್ಲಿ ನಾನು ಪ್ರಸಂಗಿಸಬಹುದು. ಇಲ್ಲಿ ವಿರೋದಾಭಾಸವಿದೆ: ಯೇಸುವು ಪಾದಗಳನ್ನು ತೊಳೆಯುವಾಗ, ಆತನು ಹೃದಯಗ ಳನ್ನು ಶುದ್ಧೀಕರಿಸುತ್ತಾನೆ. ಯೇಸುವು ಮಾತ್ರವೇ ನಮ್ಮನ್ನು ಪ್ರಾಮಾಣಿಕರನ್ನಾಗಿ ಇಡಬಲ್ಲನು. ನಾವು "ಕೃಪಾವುಡದ ಕ್ರಮಕ್ಕೆ" ಸೇರಿದವರಾಗಿರತಕ್ಕದ್ದು.

ಪೇತ್ರನು ಮತ್ತು ಇತರ ಶಿಷ್ಯರು "ಯಥೋಚಿತ್ತವಲ್ಲದ ವರದ" ಬಗ್ಗೆ ಕಲಿತುಕೊಂಡು ಸ್ವೀಕರಿಸಿಕೊಳ್ಳಬೇಕಾಗಿತ್ತು. ಚಿಕ್ಕಮಕ್ಕಳು ಕೆಟ್ಟ ಚಿತ್ರಗಳನ್ನು ಚಿತ್ರಿಸಲಾರರು. ಗೆರೆಗಳೊ ಳಗೆ ಅವರು ಬಣ್ಣ ಹಾಕದಿರಬಹುದು, ಆದರೆ ಅವರು ಮಕ್ಕಳು ಮಕ್ಕಳಾಗಿಯೇ ಇರುತ್ತಾರೆ. ನಾವು ಅವರನ್ನು ಅಪ್ಪಿಕೊಳ್ಳುತ್ತೇವೆ, ಉಪಕಾರ ಹೇಳುತ್ತೇವೆ ಮತ್ತು ಅವರು ಬಣ್ಣ ಹಚ್ಚಿದ ಪೇಪರುಗಳನ್ನು ಕಾದಿಡುತ್ತೇವೆ. ಇದು ದೇವರ ಮತ್ತು ನಮ್ಮೊಂದಿಗೆ ಸತ್ಯವಾಗಿರುತ್ತದೆ. ನಾವು ಪರಿಪೂರ್ಣರಾಗಿರಲಾರೆವು; ನಾವು ಪ್ರತಿಯೊಂದನ್ನು ಸರಿಯಾಗಿ ಮಾಡಲಾರೆವು; ನಾವು ಸೋಲುಗಳನ್ನು ತಪ್ಪಿಸಿಕೊಳ್ಳಲಾರೆವು. ಮಕ್ಕಳು ಕಲಿಯುವ ಮತ್ತು ಬೆಳೆಯುವ ರೀತಿ ಇದಾಗಿರುತ್ತದೆ. ಯೇಸುವು ನಮ್ಮ ಪಾದಗಳನ್ನು ತೊಳೆಯುವಾಗ, ನಾವು ಸೋಲು ವದಕ್ಕೂ ಬಿಡಲ್ಪಟ್ಟಿರುವೆವು! ಅನೇಕರು ತಾವು ಚೆನ್ನಾಗಿ ಮಾಡಲಾರದವರಾಗಿರುವ ದರಿಂದ ಸೇವೆ ಮಾಡುವದನ್ನು ನಿರಾಕರಿಸುತ್ತಾರೆ. ನೀವು ಯಶಸ್ವಿಯಾಗಬೇಕಾಗಿಲ್ಲ; ನೀವು ನಂಬಿಗಸ್ತರಾಗಿರಬೇಕು. ನೀವು ಇರುವಲ್ಲಿ, ನಿಮಗಿರುವಂಥದ್ದರೊಂದಿಗೆ ನೀವು ಮಾಡಬೇಕಾದದ್ದನ್ನು ಮಾಡಿರಿ. ಇತರರು ಏನನ್ನೇ ಮಾಡಿದ್ದರೂ, ಪೇತ್ರನು ಪೇತ್ರನಿಗೆ ಮಾತ್ರವೇ ಜವಾಬ್ದಾರನಾಗಿದ್ದನು. ನೀವು ಸೇವೆ ಮಾಡುವದರ ಮೇಲೆ ರಕ್ಷಣೆಯು ಅವಲಂಭಿಸಿ ಇರುವದಿಲ್ಲ, ಆದರೆ ದೇವರು ನಮಗೆ ಸೇವೆ ಮಾಡಲು ಬಿಡಲ್ಪಡುವದರ ಮೇಲೆ ಅವಲಂಭಿಸಿರುತ್ತದೆ. ಯುದ್ಧವು ಕರ್ತನದಾಗಿದೆ. ಬಲವು ಸಂದೇಶದಲ್ಲಿದೆ. ದೇವರ ಯಥಾರ್ಥವಾದ ಸೇವಕರಾಗಿರಲಿಕ್ಕೆ ನಾವು ದೇವರಿಂದ ಸೇವೆ ಮಾಡಿಸಿಕೊಳ್ಳ ತಕ್ಕದ್ದು. ನಾವು ಇತರರನ್ನು ನಡಿಸಿಕೊಳ್ಳುವುದು ದೇವರು ನಮ್ಮನ್ನು ನಡಿಸಿಕೊಳ್ಳು ವದನ್ನು ನಾವು ಗ್ರಹಿಸಿಕೊಳ್ಳುವ ಮಾರ್ಗವಾಗಿದೆ.

## "ನನ್ನಂತೆ ಆಗಿರಿ"

ತಾನು ಮಾಡಿದಂತೆ ತನ್ನ ಶಿಷ್ಯರು ಮಾಡಬೇಕೆಂದು ಯೇಸು ಹೇಳಿದನು (ಯೋಹಾನ 13:13-17). ಯೇಸುವು ಒಂದೇ ಒಂದು ಆಜ್ಞೆಯನ್ನು ಕೊಟ್ಟಿದ್ದಾನೆ: "ನನ್ನನ್ನು ಹಿಂಬಾಲಿಸು" (ಮತ್ತಾಯ 4:19; 9:9; 1 ಪೇತ್ರ 2:21). ಕ್ರೈಸ್ತತ್ವವು ಕ್ರಿಸ್ತನಾಗಿದ್ದಾನೆ. "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" (1 ಕೊರಿಂಥ 11:1) ಎಂದು ಪೌಲನು ಹೇಳಿದನು. ತನ್ನನ್ನು ಅನುಸರಿಸಬೇಕೆಂದು ಫಿಲಿಪ್ಪಿಯವರಿಗೆ ಖಂಡಿತವಾಗಿ ಹೇಳಿದನು (ಫಿಲಿಪ್ಪಿ 3:17). ಆಗ ಅವನು ತನ್ನ ಜೀವಿತವನ್ನೂ ಆತ್ಮವನ್ನೂ ಅವರಿಗೆ ಬಹಿರಂಗಪಡಿಸಿದನು: "ನೀವು ಯಾವುದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕೊಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ. ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು" (ಫಿಲಿಪ್ಪಿ 4:9). ಕಳೆದ ಹಲವಾರು ವರ್ಷಗಳಿಂದ, "ನನ್ನನ್ನು ಹಿಂಬಾಲಿಸಿರಿ" ಎಂದು ಹೇಳುತ್ತ ನನ್ನ ಸಹೋದರರ ಮುಂದೆ ನಾನು ನಿಂತುಕೊಂಡಿದ್ದೇನೆ. ನಾನು ಐವತ್ತು ವರ್ಷಗಳಿಂದ ಪ್ರಸಂಗಿಸುತ್ತಾ ಇದ್ದೇನೆ - ಇದನ್ನು ಹೇಳುವದಕ್ಕಿಂತ ಮೊದಲು ಇನ್ನೂ ಎಷ್ಟು ಕಾಲ ನಾನು ಪ್ರಸಂಗಿಸುವದನ್ನು ಮುಂದರಿಸಬೇಕು? "ನಮ್ಮನ್ನು ಹಿಂಬಾಲಿಸಿರಿ" ಎಂದು ಹಿರಿಯರು ತಮ್ಮ ಕುರಿಗಳ ಮುಂದೆ ಕೂಗುತ್ತ ನಿಲ್ಲಬೇಕು. "ನಮ್ಮನ್ನು ಹಿಂಬಾಲಿಸಿರಿ" ಎಂದು ತಂದೆತಾಯಿಗಳು ತಮ್ಮ ಮಕ್ಕಳಿಗೆ ಹೇಳತಕ್ಕದ್ದು. ನೀವು ಪ್ರತಿಕ್ರಿಯಿಸುವ ಮೊದಲು, *ಅವರು ಮಾಡುವರು!* ಕುರಿಗಳು ಹಿಂಬಾಲಿಸುವವು. ನಮ್ಮ ಜವಾಬ್ದಾರಿಕೆಯು ಸರಿಯಾದ ಮಾರ್ಗದಲ್ಲಿ ನಡಿಸುವುದಾಗಿದೆ. ನಾವು ಯೇಸುವಿನೊಂದಿಗೆ ಸಮಯ ಕಳೆದಿರುವೆವೆಂಬುದು ನಮ್ಮ ಸಹಪಾಠಿಗಳಿಗೆ ಸ್ಪಷ್ಟವಾಗಿದೆಯೋ? ಶಿಷ್ಯರ ಸುತ್ತಲಿದ್ದವರು, "... ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು" (ಅಪೊಸ್ತಲರ ಕೃತ್ಯಗಳು 4:14). ಸೇವಕರಿಂದ ನಿಮ್ಮ ಪ್ರಸಂಗಿಗಳನ್ನು ಆಯ್ಕೆಮಾಡಿಕೊಳ್ಳಿರಿ. ಸೇವಕರಿಂದ ನಿಮ್ಮ ಹಿರಿಯರನ್ನು ಆರಿಸಿಕೊಳ್ಳಿರಿ. ನಾವು ಕ್ರಿಸ್ತನ ಸೇವಕರಾಗಿರುವಾಗ, ನಮ್ಮ ಮಕ್ಕಳು - ಸಹೋದರರು - ನಮಗೆ "ಇಲ್ಲ" ಎಂದು ಹೇಳುವದಿಲ್ಲ.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

---
ಟಿಪ್ಪಣಿ

[1]ಪೇತ್ರನು ಶಿಷ್ಯರ ಮಾನವತೆಯನ್ನು ಉದಾಹರಿಸುತ್ತಾನೆ, ಮತ್ತು ಈ ಮುಖ್ಯ ಅಂಶವು ಆ ವಿಚಾರವನ್ನು ಸೆರೆಹಿಡಿದಿಡುತ್ತದೆ. ಹೀಗಿದ್ದರೂ ಅವರ ಕಲ್ಪನೆಗಾಗಿ, ಲಾರೆನ್ಸ್ ಎಫ್. ಪೀಟರ್ ಅವರಿಗಾಗಿ ಹೆಸರಿನಿಂದ ಈ ಮಾತು ಬರುತ್ತದೆ. ಒಂದು ಸಂಘಟನೆಯೊಳಗೆ ಒಬ್ಬ ಕಾರ್ಮಿಕನು ತನ್ನ ಅಯೋಗ್ಯತೆಯ ಮಟ್ಟಕ್ಕೆ ಮುಂದುವರಿಸಲ್ಪಡುತ್ತಾನೆ ಇಲ್ಲವೇ ಅಲ್ಲಿಯೇ ಉಳಿದುಕೊಳ್ಳು ತ್ತಾನೆ ಎಂಬುದು ಆ ಕಲ್ಪನೆ.

© 2009 Truth for Today